# ಶ್ರೀ ಸಿದ್ಧಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ತುಮಕೂರು.

## ಸೂಚನೆ

ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆ ಮತ್ತು ತುಮಕೂರು ವಿಶ್ವವಿದ್ಯಾನಿಲಯದ ನಿರ್ದೇಶನದ ಮೇರೆಗೆ ಕೋವಿಡ್ ಮಾರ್ಗಸೂಚಿಯನ್ನು ಪಾಲಿಸಿ ದಿನಾಂಕ:-26-07-2021 ರ ಸೋಮವಾರದಿಂದ ನಮ್ಮ ಕಾಲೇಜಿನಲ್ಲಿ ಭೌತಿಕ ತರಗತಿಗಳನ್ನು ಪ್ರಾರಂಭಿಸಲಾಗುತ್ತಿದೆ. ಅಂತಿಮ ಪದವಿಯ ಎಲ್ಲಾ ತರಗತಿಗಳ ವಿದ್ಯಾರ್ಥಿಗಳಿಗೆ ರಜಾದಿನಗಳನ್ನು ಹೊರತುಪಡಿಸಿ ಪ್ರತಿದಿನವೂ ನಿರಂತರವಾಗಿ ಭೌತಿಕ ತರಗತಿಗಳು ಮತ್ತು ಪ್ರಯೋಗಾಲಯ ತರಗತಿಗಳನ್ನು ನಡೆಸಲಾಗುತ್ತದೆ. ಆದರೆ ಪ್ರಥಮ ಮತ್ತು ದ್ವಿತೀಯ ಪದವಿ ವಿದ್ಯಾರ್ಥಿಗಳಿಗೆ ಮುಂದಿನ ಸೂಚನೆಯವರೆಗೆ ಭೌತಿಕ ತರಗತಿಗಳು ಮತ್ತು ಆನ್‌ಲೈನ್ ತರಗತಿಗಳೆರಡನ್ನು ಸರದಿಯ ಪ್ರಕಾರ ಆಯೋಜಿಸಲಾಗುತ್ತದೆ. ವಿದ್ಯಾರ್ಥಿಗಳು ಈ ಕೆಳಗೆ ಸೂಚಿಸಿರುವ ಕ್ರಮದಂತೆ ಭೌತಿಕ & ಆನ್‌ಲೈನ್ ತರಗತಿಗಳಿಗೆ ಹಾಜರಾಗುವುದು. ಭೌತಿಕ ತರಗತಿಗಳಿಗೆ ಹಾಜರಾಗುವ ವಿದ್ಯಾರ್ಥಿಗಳು ಈ ಕೆಳಕಂಡ ಕೋವಿಡ್ ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂದು ಸೂಚಿಸಲಾಗಿದೆ.

24/07/2021

ಪ್ರಾಂಶುಪಾಲರು

PRINCIPAL
Sree Siddaganga College
of Arts, Science and Commerce.
B.H. Road, TUMKUR-572 102.

### ಭೌತಿಕ ತರಗತಿಗಳು ಮತ್ತು ಆನ್‌ಲೈನ್ ತರಗತಿಗಳಿಗೆ ಹಾಜರಾಗಬೇಕಾದ ವಿವರಗಳು

| ಕ್ರ.ಸಂ | ತರಗತಿಗಳು | ಹಾಜರಾಗಬೇಕಾದ ದಿನಗಳು |
|---|---|---|
| 1 | ಅಂತಿಮ ಪದವಿಯ ಎಲ್ಲಾ ತರಗತಿಗಳ ವಿದ್ಯಾರ್ಥಿಗಳು | ವೇಳಾಪಟ್ಟಿಯ ಪ್ರಕಾರ ಪ್ರತಿದಿವಸ ಭೌತಿಕ ತರಗತಿಗಳು & ಪ್ರಯೋಗಾಲಯ ತರಗತಿಗಳಿಗೆ ಹಾಜರಾಗುವುದು |
| 2 | ದ್ವಿತೀಯ ಪದವಿಯ ವಿದ್ಯಾರ್ಥಿಗಳು | ಪ್ರತಿ ಮಂಗಳವಾರ, ಗುರುವಾರ ಮತ್ತು ಶನಿವಾರ ಭೌತಿಕ ತರಗತಿಗಳು ಹಾಗೂ ಪ್ರತಿ ಸೋಮವಾರ, ಬುಧವಾರ& ಶುಕ್ರವಾರಗಳಂದು ಆನ್‌ಲೈನ್ ತರಗತಿಗಳಿಗೆ ಹಾಜರಾಗುವುದು. |
| 3 | ಪ್ರಥಮ ಪದವಿ ವಿದ್ಯಾರ್ಥಿಗಳು | ಪ್ರತಿ ಸೋಮವಾರ, ಬುಧವಾರ & ಶುಕ್ರವಾರಗಳಂದು ಭೌತಿಕ ತರಗತಿಗಳು ಹಾಗೂ ಪ್ರತಿ ಮಂಗಳವಾರ, ಗುರುವಾರ & ಶನಿವಾರಗಳಂದು ಆನ್‌ಲೈನ್ ತರಗತಿಗಳಿಗೆ ಹಾಜರಾಗುವುದು. |

## ವಿದ್ಯಾರ್ಥಿಗಳು ಭೌತಿಕ ತರಗತಿಗಳಿಗೆ ಹಾಜರಾಗುವಾಗ ಪಾಲಿಸಬೇಕಾದ ನಿಭಂದನೆಗಳು

1. ಕಡ್ಡಾಯವಾಗಿ ಮೊದಲನೆಯ ಡೋಸ್ ಕೋವಿಡ್ ಲಸಿಕೆಯನ್ನು ಪಡೆದಿರಬೇಕು. ಅದರ ದಾಖಲೆಯನ್ನು ತರಗತಿ ಶಿಕ್ಷಕರ ಬಳಿ ತೋರಿಸಿ ನೊಂದಾಯಿಸಿಕೊಳ್ಳುವುದು.
2. ವಿದ್ಯಾರ್ಥಿಗಳು ಕಡ್ಡಾಯವಾಗಿ ಮಾಸ್ಕ್ ಧರಿಸುವುದು.
3. ಪ್ರವೇಶ ದ್ವಾರದಲ್ಲಿ ಥರ್ಮಲ್ ಸ್ಕ್ಯಾನ್ ಪರೀಕ್ಷೆಗೆ ಒಳಪಡಬೇಕು.
4. ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾಲೇಜಿನ ಗುರುತಿನ ಚೀಟಿಯನ್ನು ಧರಿಸುವುದು ಹಾಗೂ ಲಸಿಕೆ ಪಡೆದ ಪ್ರಮಾಣ ಪತ್ರವನ್ನು ಯಾವಾಗಲೂ ತಮ್ಮ ಬಳಿ ಇಟ್ಟುಕೊಳ್ಳಬೇಕು.
5. ಕಾಲೇಜಿನ ಆವರಣದಲ್ಲಿ ಉಗುಳಬಾರದು & ಗುಂಪು ಸೇರಬಾರದು.
6. ವಿದ್ಯಾರ್ಥಿಗಳು ಅಧ್ಯಾಪಕರು ಮತ್ತು ತರಗತಿಗಳ ಶಿಕ್ಷಕರ ಸೂಚನೆಗಳನ್ನು ಪಾಲಿಸುವುದು.
7. ಯೋಗಾಭ್ಯಾಸ & ಧ್ಯಾನ ಇನ್ನು ಮುಂತಾದವುಗಳನ್ನು ನಿತ್ಯ ಜೀವನ ಶೈಲಿಯಲ್ಲೂ ಅಳವಡಿಸಿಕೊಳ್ಳುವುದು.
8. ಕೋವಿಡ್ ರೋಗಲಕ್ಷಣವುಳ್ಳ ಸಹಪಾಠಿಗಳ ಮಾಹಿತಿಯನ್ನು ಪ್ರಾಚಾರ್ಯರಿಗೆ ತಿಳಿಸುವುದು.
9. ಕುಡಿಯುವ ನೀರು, ತಿಂಡಿ ಹಾಗೂ ಸ್ಯಾನಿಟೈಸರ್‌ನ್ನು ವಿದ್ಯಾರ್ಥಿಗಳೇ ತರುವುದು.
10. ಯಾವುದೇ ಕಾರಣಕ್ಕೂ ಉಪಯೋಗಿಸುವ ಮಾಸ್ಕ್‌ಗಳನ್ನು ಕಾಲೇಜಿನ ಆವರಣದಲ್ಲಿ ಬಿಸಾಡಬಾರದು.
11. ತರಗತಿಯ ಕೊಠಡಿಗಳಿಗೆ ಸರತಿ ಸಾಲಿನಲ್ಲಿ ಪ್ರವೇಶ ಪಡೆಯುವುದು.